ಮಹಾನ್ ಗುರುವಿನ ಪದತಲದಲ್ಲಿ ತನ್ನನ್ನು ಸಂಪೂರ್ಣ ಸಮರ್ಪಿಸಿಕೊಂಡ ಸೋದರಿ ನಿವೇದಿತಾ, ಗುರುವಿನ ಏಕೈಕ ಗುರಿಯಾಗಿದ್ದ ಈ ದೇಶದ ದೀನದರಿದ್ರರ ಅಜ್ಞಾನ ಮೌಢ್ಯಗಳನ್ನು ನಿವಾರಿಸಿ ಉದ್ಧರಿಸಬೇಕೆಂಬ ಪವಿತ್ರ ಕೈಂಕರ್ಯದಲ್ಲಿ ತನ್ನ ಜೀವನವನ್ನೇ ಸವೆಸಿದ್ದಾಳೆ, ಧನ್ಯಳೆನಿಸಿದ್ದಾಳೆ. ನಾವೆಲ್ಲರೂ, ಅದರಲ್ಲೂ ಹಿಂದೂ ಮಹಿಳೆಯರು ತಲೆತಲಾಂತರದಲ್ಲಿಯೂ ಆಕೆಯನ್ನು ಸ್ಮರಿಸಿ ಗೌರವಿಸಬೇಕು.

ಕೊನೆಯ ಬಾರಿ ಸ್ವಾಮೀಜಿಯನ್ನು ನೋಡಲು ನಿವೇದಿತಾ ಮಠಕ್ಕೆ ಹೋದಾಗ ಏಕಾದಶಿಯ ನಿಮಿತ್ತ ಅವರು ಪೂರ್ಣ ಉಪವಾಸ ಇದ್ದರು. ಆದರೆ ಆಕೆಗೆ ಬಲವಂತ ಮಾಡಿ ಆಹಾರ ತೆಗೆದುಕೊಳ್ಳುವಂತೆ ಸೂಚಿಸಿದರು. ಆಕೆ ಊಟ ಮಾಡಿದ ಮೇಲೆ ಸ್ವಯಂ ಸ್ವಾಮೀಜಿಯೇ ಅವಳ ಕೈಗಳನ್ನು ತೊಳೆದು, ಒಂದು ವಸ್ತ್ರದಿಂದ ಆಕೆಯ ಕೈಗಳನ್ನು ಒರೆಸಿದರು. ಆಗ ಸಂಕೋಚಗೊಂಡ ಸೋದರಿ, “ಈ ಉಪಚಾರಗಳನ್ನೆಲ್ಲ ನಾನು ತಮಗೆ ಮಾಡಬೇಕು, ನೀವು ನನಗೆ ಮಾಡುವುದು ಸರಿಯಲ್ಲ” ಎಂದಾಗ ಸ್ವಾಮೀಜಿ ಗಂಭೀರವಾಗಿ, “ಏಸುಕ್ರಿಸ್ತ ತನ್ನ ಶಿಷ್ಯರ ಪಾದಗಳನ್ನು ತೊಳೆದನು” ಎಂದರು. ಆದರೆ ಆ ಪ್ರಸಂಗ ಕ್ರಿಸ್ತನ ಜೀವನದ ಅಂತಿಮ ಕ್ಷಣಗಳಲ್ಲಿ ಎಂದು ಆಕೆಗೆ ಗೊತ್ತಿತ್ತು. ಅದರಿಂದ ಮನದಲ್ಲಿಯೆ ನಿವೇದಿತಾ ಕಳವಳಗೊಂಡಳು.

೧೯೦೨ರ ಜುಲೈ ೪ ರಂದು ಸ್ವಾಮೀಜಿ ಇಹಲೋಕದ ಎಲ್ಲ ಭಾರಗಳಿಂದ ಬಿಡುಗಡೆ ಹೊಂದಿ, ಶಾಂತಿ ಪಡೆದು ದೇಹತ್ಯಾಗ ಮಾಡಿದರು. ತಾಯಿಯನ್ನು ಕಳೆದುಕೊಂಡ ತಬ್ಬಲಿಯಂತಾದರೂ ನಿವೇದಿತಾ, ಸ್ವಾಮಿ ವಿವೇಕಾನಂದರು ತನಗೆ ವಹಿಸಿದ್ದ ಸೇವಾ ಕಾರ್ಯಗಳನ್ನು ನಿಷ್ಠೆಯಿಂದ ಮುಂದುವರಿಸಿದಳು. ಶ್ವೇತ ಶುಭ್ರವಸ್ತ್ರ ಧರಿಸಿ, ರುದ್ರಾಕ್ಷಿ ಮಾಲೆ ಹಾಕಿಕೊಂಡು ನಾಡಿನೆಲ್ಲೆಡೆ ಓಡಾಡಿ, ಹಿಂದೂ ಮಹಿಳೆಯರ ಕಣ್ಣು ಮನಗಳನ್ನು ತೆರೆಸಿದಳು. ೧೯೧೧ ರ ಅಕ್ಟೋಬರ್ ೧೧ ರಂದು ಡಾರ್ಜಿಲಿಂಗ್‌ನಲ್ಲಿ ‘ಸೋದರಿ ನಿವೇದಿತಾ’ ಎಂಬ ದಿವ್ಯಜ್ಯೋತಿ ಅಸ್ತಂಗತವಾಯಿತು.

ಒಬ್ಬ ಪಾಶ್ಚಾತ್ಯ ಮಹಿಳೆಯಾದರೂ ಭಾರತಕ್ಕೆ ಬಂದು, ಭಾರತೀಯ ಸ್ತ್ರೀಯರ ಬದುಕಿನ ರೀತಿನೀತಿ, ಅಜ್ಞಾನ, ಮೌಢ್ಯ, ದಾಸ್ಯಭಾವಗಳನ್ನು ಕಂಡು ಮರುಕಪಟ್ಟು, ತಾನೂ ಅವರೊಳಗೊಂದಾಗಿ ಉಳಿದು, ಸ್ವಾಮಿ ವಿವೇಕಾನಂದರ ಮಾರ್ಗದರ್ಶನ ಪ್ರೋತ್ಸಾಹಗಳಿಂದ ಸ್ಫೂರ್ತಿ ಪಡೆದು, ಶ್ರದ್ಧೆ ನಿಷ್ಠೆಗಳಿಂದ ಸೇವೆ ಮಾಡಲೆಂದು ತನ್ನ ಜೀವನವನ್ನೇ ಮುಡಿಪಾಗಿಟ್ಟ ಸೋದರಿ ನಿವೇದಿತಾಳನ್ನು ನಾವೆಲ್ಲ ಎಂದೆಂದಿಗೂ ಮನಃಪೂರ್ವಕವಾಗಿ ನೆನೆಯುತ್ತಿರಬೇಕು.

## ಸ್ವಾಮಿ ವಿವೇಕಾನಂದರ ಸ್ಫೂರ್ತಿ ಮತ್ತು ಪ್ರಭಾವ – ಅನುಭವ ಕಥನ

### ಮನಮಿಡಿದ ವ್ಯಕ್ತಿತ್ವ

ಸ್ವಾಮಿ ವಿವೇಕಾನಂದರಿಂದ ನಾನು ಪಡೆದ ಸ್ಫೂರ್ತಿ ಮತ್ತು ಅವರು ನನ್ನ ಮೇಲೆ ಬೀರಿದ ಪ್ರಭಾವ ಕಲ್ಪನಾತೀತ ! ಬಹಳ ವರ್ಷಗಳ ಹಿಂದೆಯೇ ಅವರ ಸಮಗ್ರ ಜೀವನಚರಿತ್ರೆಯನ್ನು ಆಮೂಲಾಗ್ರವಾಗಿ ವಾಚಿಸುವ ಸುವರ್ಣಾವಕಾಶವೊದಗಿ ಇವರ ದಿವ್ಯಸಾನ್ನಿಧ್ಯವನ್ನನುಭವಿಸಿ ಮೈಮರೆಯುವಂತಾಯಿತು. ಅವರು ವಿದೇಶದಿಂದ ತಮ್ಮ ಗುರುಭಾಯಿಗಳಿಗೂ ರಾಜಮಹಾರಾಜರುಗಳಿಗೂ ಬರೆದಿರುವ ಪತ್ರಮಾಲೆಯಂತೂ ನನ್ನನ್ನು ಬಡಿದೆಬ್ಬಿಸಿತು. ಸ್ವಾಮಿ ವಿವೇಕಾನಂದರ ಅಸದೃಶ ಮಾತೃಭಕ್ತಿ, ಅನನ್ಯ ಗುರುಭಕ್ತಿ, ಅಪಾರ ದೇಶಪ್ರೇಮ, ಅನಂತಜ್ಞಾನ, ಅನುಪಮ ವಾಕ್ಚಾತುರ್ಯ, ದೀನದಲಿತರ ಮೇಲಿನ ಅವರ ಅಪ್ರತಿಮ ಅನುಕಂಪ, ಬಹುಮುಖ ಪ್ರತಿಭೆ ನನ್ನ ಮನಮಿಡಿದವು! ಕಾರ್ಯೋನ್ಮುಖಿಯಾಗೆಂದು ಎಚ್ಚರಿಸಿದವು ! ಸುದೀರ್ಘ ದೇಶಪರ್ಯಟನೆ, ವಿದೇಶ ವಾಸ – ಇವುಗಳಲ್ಲಿ ಅವರಿಗೆ ಎದುರಾದ ಅಗ್ನಿಪರೀಕ್ಷೆಗಳು ಒಂದೇ ಎರಡೇ? ವರ್ಣನಾತೀತ! ಅವರು ನುಂಗಿರುವ ನೋವನ್ನು ಅವರೊಬ್ಬರೇ ಬಲ್ಲರಲ್ಲದೇ ಮತ್ತಾರು ಬಲ್ಲರು ? ಈ ದಿವ್ಯಾತ್ಮರ ಕಷ್ಟಕೋಟಲೆಗಳೆದುರು ನನ್ನ ಜೀವನ ಹೂವಿನ ಹಾಸಿಗೆಯಾಗಿತ್ತು. ಅದಕ್ಕಾಗಿ ಹೃದಯ ಚಡಪಡಿಸಲಾರಂಭಿಸಿತು. ೯೩ರ ಹರಯದಲ್ಲಿ ಅಮೆರಿಕದ ಶಿಕಾಗೋ ನಗರದ ‘ಸರ್ವಧರ್ಮ ಸಮ್ಮೇಳನ’ದ ವೇದಿಕೆಯಲ್ಲಿ ಸನಾತನ ಹಿಂದೂಧರ್ಮದ ಹಿರಿಮೆ ಗರಿಮೆಯನ್ನು ಕಂಚಿನ ಕಂಠದಿಂದ ಮೊಳಗಿ, ಶ್ರೋತೃಗಳಿಗೆ ವಿದ್ಯುತ್ ಸಂಚಾರದ ದಿವ್ಯಾನುಭವವನ್ನುಣಿಸಿರುವುದು ರೋಮಾಂಚಕ ! ಅಸಂಖ್ಯಾತ ವಿಧರ್ಮೀಯರು ಸ್ವೇಚ್ಛೆಯಿಂದ ಈ ದ್ರಷ್ಟಾರರ ಶಿಷ್ಯರಾಗಿ ಭಾರತಾಂಬೆಯ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ಧನ್ಯರಾದರು ! ಇದನ್ನು ಅರಿತು, ನಾನೂ ಏನಾದರೊಂದು ರಚನಾತ್ಮಕ ಕಾರ್ಯವನ್ನು ಮಾಡಲೇಬೇಕೆಂಬ ಛಲವುದಯಿಸಿತು. ನನ್ನ ನೆಚ್ಚಿನ ಧೀರನಾಯಕನ ಹೊಂಗನಸನ್ನು ತೃಣದಷ್ಟು ಸಾಕಾರಗೊಳಿಸಲು ನಾನೇನು ಮಾಡಿರುವೆ ? ನನ್ನನ್ನು ನಾನೇ ಪ್ರಶ್ನಿಸಿ ಒಂದೆರಡು ಉತ್ತರಗಳನ್ನು ಅತೃಪ್ತಿಯಿಂದಲೂ ಮುಜುಗರದಿಂದಲೂ ನೀಡುವೆನು. “ಯುವಕರು! ಯುವಕರು! ಯುವಕರು!” ಈ ಯೋಧಸಂನ್ಯಾಸಿಗೆ ಯುವಕರಲ್ಲಿ ಅತೀವ ಭರವಸೆ! “ಏಳಿ, ಎದ್ದೇಳಿ, ಗುರಿಮುಟ್ಟುವವರೆಗೂ ನಿಲ್ಲದಿರಿ!” ಏನದ್ಭುತ ಈ ಕರೆ! ಈ ಅಪೂರ್ವ ದಾರ್ಶನಿಕರ ಸಹಸ್ರಾರು ಸ್ಫೂರ್ತಿದಾಯಕ ಸಂದೇಶಗಳಲ್ಲಿ ಒಂದೆರಡನ್ನಾದರೂ ಜಿಲ್ಲೆಯ ಶಾಲಾಕಾಲೇಜು ವಿದ್ಯಾರ್ಥಿಗಳಿಗೂ ಸಾರ್ವಜನಿಕರಿಗೂ ಒಯ್ಯುವ ತೀವ್ರ ಹಂಬಲ! ಆ ದಿವ್ಯ ಚೇತನವೇ ನನ್ನ ಜಿಲ್ಲೆಯ ಬಹುತೇಕ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸುವಂತೆ ಪ್ರೇರೇಪಿಸಿತು. ನಾನು ಬರೆದ ಈ ಮಹಾಯೋಗಿಯ ಜೀವನಚರಿತ್ರೆ ಜಿಲ್ಲೆಯ ಸಾಪ್ತಾಹಿಕ ‘ತೂಕ್ ಬೊಳಕ್’ ಪತ್ರಿಕೆಯಲ್ಲಿ ಕೊಡವ ಭಾಷೆಯಲ್ಲಿ ಅಂದಾಜು ಹತ್ತು ವರ್ಷಗಳಿಂದ ನಿರಂತರ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವುದು ಈ ಧೀಮಂತ ಸಂನ್ಯಾಸಿಯ ಸತ್ಪ್ರಭಾವವಲ್ಲದೆ ಮತ್ತಿನ್ನೇನು ? ಇವರು ತಮ್ಮ ಕೃತಿಶ್ರೇಣಿಯಲ್ಲಿ ಪ್ರತಿಪಾದಿಸುವ ನಾಲ್ಕು ಯೋಗಗಳ ವ್ಯಾಖ್ಯಾನವು ಅನುಕರಣಯುಕ್ತವೂ ಅತ್ಯವಶ್ಯವೂ ಆಗಿದೆ ಎಂದರಿತು ಕೊಂಚಮಟ್ಟಿಗೆ ಅನುಷ್ಠಾನಕ್ಕೆ ತರಲು ಯತ್ನಿಸುತ್ತಿರುವೆನು. ಪದ್ಮಾಸನದ ಧ್ಯಾನಸ್ಥ ಭಂಗಿಯಲ್ಲಿ ಕುಳಿತಿರುವ ಇವರ ತೇಜೋಮಯ ಕಮಲವದನವು ಸಾಕ್ಷಾತ್ ಶಿವನ ಸಾನ್ನಿಧ್ಯವನ್ನುಂಟುಮಾಡುವುದು, ಮೈಮನ ಮರೆಯುವುದು! ಈ ಅಪೂರ್ವ ಸಂನ್ಯಾಸಿ ಸ್ವಾಮಿ ವಿವೇಕಾನಂದರು ತಮ್ಮ ಕಿಂಚಿತ್ ಸೇವೆಗೆ ನನ್ನನ್ನು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಕಣದಷ್ಟಾದರೂ ತೊಡಗಿಸಿಕೊಂಡಿರುವುದಕ್ಕೆ ನಾನು ಎಂದೆಂದಿಗೂ ಅವರಿಗೆ ಚಿರಋಣಿ !

– ಶ್ರೀಮತಿ ಹೊಟ್ಟೆಂಗಡ ಸುಂದರಿ ಮಾದಪ್ಪ, ದಕ್ಷಿಣ ಕೊಡಗು

*With Best Compliments from :*

# Technopolymers
## Private limited

**TECHNOPOLYMERS PRIVATE LIMITED**

B-185, 2nd STAGE,
PEENYA INDUSTRIAL ESTATE,
BANGALORE - 560 058.
PHONE: 28360264
Email: technopolymers.pvtltd@gmail.com

*With Best Compliments from:*

# R. H. RADHAKRISHNA GUPTA JEWELLERS



**Vijaya Lakshmi Road, Davanagere - 577 001**

**☎: Shop : 08129 - 232180**



# ವಿವೇಕಾನಂದರ ತತ್ತ್ವದರ್ಶನ

ಗೌರಮ್ಮ

**ಸ್ವಾಮಿ ವಿವೇಕಾನಂದರು ಬರಡು ತತ್ತ್ವಜ್ಞಾನಿಯಲ್ಲ; ಬಾಳಿನ ಸಮಸ್ತ ಆಯಾಮಗಳಿಗೂ ಅಧ್ಯಾತ್ಮದ ಬೆಳಕು ತಂದ ಮಹರ್ಷಿ. ಅವರದು ಮಾನವಕೇಂದ್ರಿತ ದರ್ಶನ; ಸಮಷ್ಟಿ ಹಿತದ ಚಿಂತನೆ. ಸ್ವಾಮಿ ವಿವೇಕಾನಂದರ ವಿಚಾರಲಹರಿಯ ಹತ್ತು ಹಲವು ಹರವುಗಳನ್ನು ಈ ಲೇಖನದಲ್ಲಿ ಮನೋಜ್ಞವಾಗಿ ವಿಶದೀಕರಿಸಲಾಗಿದೆ. ಇದರ ಲೇಖಕರು ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನ ಪ್ರಾಚಾರ್ಯರಾಗಿದ್ದಾರೆ.**

ತಮ್ಮ ಅಪ್ರತಿಮ ಸ್ವಶಕ್ತಿ, ಸಾಮರ್ಥ್ಯಗಳಿಂದ, ಅಪಾರ ಧೈರ್ಯ ಮತ್ತು ಅಚಲವಾದ ಛಲದಿಂದ, ಅಗಾಧವಾದ ಆಂತರಿಕ ಚೈತನ್ಯಸ್ಫೂರ್ತಿಯಿಂದ, ದಿಟ್ಟತನದ ಹೋರಾಟದ ವರ್ಚಸ್ಸಿನಿಂದ, ಅದ್ಭುತ ಪ್ರತಿಭಾಸಂಪನ್ನತೆಯಿಂದ ಜನರನ್ನು ಬೆರಗುಗೊಳಿಸಿದಂಥ ಅಸಾಮಾನ್ಯ ವ್ಯಕ್ತಿತ್ವವನ್ನು ಹೊಂದಿದ್ದಂತಹವರು ಸ್ವಾಮಿ ವಿವೇಕಾನಂದರು. ಅವರ ಬಗ್ಗೆ ರೆವರೆಂಡ್ ಡಾಕ್ಟರ್ ಫೇಮಲ್ಸ್‌ರವರ 'A man of gigantic intellect' (ಅಗಾಧ ಬುದ್ಧಿಮತ್ತೆಯ ವ್ಯಕ್ತಿ) ಎಂಬ ಉದ್ಗಾರ ಮತ್ತು ಶ್ರೀ ಅರವಿಂದರ 'ಅಪಾರ ಶಕ್ತಿಯ ಏಕೈಕ ವ್ಯಕ್ತಿ' ಮತ್ತು 'ಪುರುಷರಲ್ಲಿ ಪುರುಷಸಿಂಹ' ನೆಂಬ ಮಾತುಗಳು ಅವರ ವ್ಯಕ್ತಿತ್ವದ ಪ್ರತಿಬಿಂಬಗಳೆನ್ನಬಹುದು. ವಿವೇಕಾನಂದರು ತಮ್ಮ ಶಕ್ತಿಯುತ ವ್ಯಕ್ತಿತ್ವ, ಪ್ರಭಾವಪೂರ್ಣ ವಾಕ್ಪಟುತ್ವ ಮತ್ತು ಉದ್ಬೋಧಕ ಬರಹಗಳ ಮೂಲಕ ನಮ್ಮ ರಾಷ್ಟ್ರಚೇತನವನ್ನು ಜಾಗೃತಗೊಳಿಸಿದರು; ಯುವಕರಲ್ಲಿ ನವೋತ್ಸಾಹವನ್ನು ಕೆರಳಿಸಿ, ಭಾರತೀಯ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಕುದುರಿಸಿ, ಸ್ವತಂತ್ರ ನವಭಾರತದ ನಿರ್ಮಾಣಕ್ಕೆ ಬುನಾದಿ ಹಾಕಿದರು.

ಸ್ವಾಮೀಜಿ ಪುರಾತನ ಮತಾಭಿಮಾನಿಗಳನ್ನು ಅವರ ತಮೋನಿದ್ರೆಯಿಂದ ಎಚ್ಚರಗೊಳಿಸಿ ಸ್ವಧರ್ಮದ ಶ್ರೇಷ್ಠತೆಯ ಪ್ರಕಾಶನದ ಜೊತೆಜೊತೆಗೆ ಅದರ ದೋಷ–ದೌರ್ಬಲ್ಯಗಳನ್ನರಿತು, ಅದರ ಪರಿಹಾರಾರ್ಥ ಅವಶ್ಯಕವಾದ ಸುಧಾರಣಾ ಕ್ರಮಗಳ ಅಗತ್ಯತೆಯನ್ನು ಪ್ರತಿಪಾದಿಸಿದರು. ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರಗಳಲ್ಲಿ, ವೇದ–ವೇದಾಂತ ತತ್ತ್ವಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಅವರು ಅವುಗಳಲ್ಲೆಲ್ಲಾ ಒಂದು ಹೊಸ ಬೆಳಕನ್ನು ಕಾಣಬಲ್ಲವರಾಗಿದ್ದರು. ಶ್ರುತಿಯಲ್ಲಿನ ಶಕ್ತಿಯೂ, ಮತಿಯಲ್ಲಿನ ಯುಕ್ತಿಯೂ ಒಂದಾಗಿ ಇರಬೇಕಾದ ಅನುಭೂತಿಯ ಪ್ರಾಶಸ್ತ್ಯದ ಅಗತ್ಯತೆಯನ್ನು ಸ್ವಾಮೀಜಿ ಒತ್ತಿ ಹೇಳಿದರು. ಶುಷ್ಕವಾದ ಜಟಿಲ ತತ್ತ್ವಶಾಸ್ತ್ರದಿಂದ ಹೊರಬಂದು ಸರಳವಾದ, ಸುಲಭವಾದ, ಜನಪ್ರಿಯವಾದ ಧರ್ಮವೊಂದನ್ನು ಕಡೆದು ರೂಪುಗೊಳಿಸಿದರು. ವೇದೋಪನಿಷತ್ತುಗಳ ಜ್ಞಾನವು ಕೇವಲ ವಾದ ವಿವಾದಗಳಲ್ಲಿ ಪರಿಸಮಾಪ್ತಿಯಾಗದೆ, ಅದರ ಪ್ರಭಾವವು ಪ್ರತಿಯೊಬ್ಬ ಜನಸಾಮಾನ್ಯರ ದಿನಚರ್ಯೆಯಲ್ಲಿಯೂ, ಕಾರ್ಯದಲ್ಲಿಯೂ ಮೈದೋರುವಂತಾಗಬೇಕೆಂಬುದು ಅವರ ಉದ್ದೇಶವಾಗಿದ್ದಿತು. ವೇದಾಂತ ತತ್ತ್ವಗಳು ಹೊರಗಿನಿಂದ ತೊಡುವ ವೇಷ–ಭೂಷಣಗಳಂತಿರದೆ, ಒಳಗೇ ಸತತವಾಗಿ ಚಲಿಸುವ ಶ್ವಾಸವಾಯುವಿನಂತಿರಬೇಕೆಂದು ಭಾವಿಸಿ, ಉಪನಿಷತ್ತುಗಳಲ್ಲಿನ ತತ್ತ್ವಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಅರ್ಥೈಸಿ, ಪರಾಮರ್ಶಿಸಿ, ಅಂತರ್ದೃಷ್ಟಿಯ ಒಂದು ಹೊಸ ಬೆಳಕನ್ನು ಸ್ವಾಮೀಜಿ ಕಂಡುಕೊಂಡರು. ಕೇವಲ ತತ್ತ್ವಬೋಧನೆ ಇಂದಿನ ಆವಶ್ಯಕತೆ ಅಲ್ಲವೆಂದು ಭಾವಿಸಿ, ಅದರ ಅಂತರಾಳದಲ್ಲಿ ಅಡಗಿರುವ ಚೇತನ ಶಕ್ತಿಯನ್ನು ಎಚ್ಚರಿಸಬೇಕೆಂಬ ಉದ್ದೇಶದಿಂದ ಅದನ್ನು ಸಾಮಾಜಿಕ ಜೀವನದಲ್ಲಿ ಅನ್ವಯಿಸುವ ಬಗೆಯನ್ನು ತಿಳಿಸಿಕೊಟ್ಟರು. ತತ್ತ್ವದ ಪ್ರಾಯೋಗಿಕ ಉಪಯುಕ್ತತೆಯ ಕಡೆಗೆ ಗಮನ ಹರಿಸಿ, ಇಂದಿನ ಜಗತ್ತಿನ ಸವಾಲಿಗೆ ಉತ್ತರದೋಪಾದಿಯಲ್ಲಿ ಅದನ್ನು ವ್ಯಾಖ್ಯಾನಿಸಿ, ಎಲ್ಲರ ದಿನನಿತ್ಯದ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತಾ, ಅದಕ್ಕೆ 'Practical Vedanta' ಎಂದು ನಾಮಕರಣ ಗೊಳಿಸಿದುದು ವಿವೇಕಾನಂದರ ವೈಶಿಷ್ಟ್ಯವೆನ್ನಬಹುದು. ಬುಟ್ಟಿಗಟ್ಟಲೆ ಉಪದೇಶ ಕೊಡುವುದರಿಂದ ಅಥವಾ ಕೇಳುವುದರಿಂದ ಏನೂ ಪ್ರಯೋಜನವಾಗದೆ ದೃಢವಾದ ಶ್ರದ್ಧೆ, ಭಾವಪರಿಪಕ್ವತೆ,





ನಿಯಮಿತ ಅಭ್ಯಾಸ ಮತ್ತು ಆತ್ಮಾವಲೋಕನಗಳೆಂಬ ಸಾಧನೆಗಳ ಮೂಲಕ ಅವುಗಳು ನಮ್ಮ ಜೀವನದಲ್ಲಿ ಪ್ರತಿಫಲಿತವಾಗುವಂತೆ ಅನುಷ್ಠಾನ ಮಾಡಬೇಕೆಂದು ಸ್ವಾಮೀಜಿ ಬೋಧಿಸಿದರು.

ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲವೆಂದೂ, ಮಾನವನಲ್ಲಿ ಈಗಾಗಲೇ ಅಡಕವಾಗಿರುವ ದೈವಿಕತೆಯ ಪ್ರಕಾಶನವೇ ಧರ್ಮವೆಂದೂ ಸಾರಿದರು. ವಿವೇಕಾನಂದರ ಮಾತಿನಲ್ಲೇ ಹೇಳುವುದಾದರೆ, 'Religion is the manifestation of divinity which is already in man.' - 'ಧರ್ಮವೆಂದರೆ ಮನುಷ್ಯನಲ್ಲಿ ಈಗಾಗಲೇ ಅಡಗಿರುವ ದಿವ್ಯತೆಯನ್ನು ಪ್ರಕಟಪಡಿಸುವುದು.' ಪ್ರಾಣಿಸಹಜ ವ್ಯಕ್ತಿಯನ್ನು ಮನುಷ್ಯನನ್ನಾಗಿಸಿ, ಮನುಷ್ಯನನ್ನು ದೇವರನ್ನಾಗಿಸುವ ಭಾವನೆಯೇ ಧರ್ಮವೆಂದು ತಿಳಿಸಿ, Man is potentially divine - "ಮಾನವನು ಸುಪ್ತದೈವನು" ಎಂಬ ಸಂದೇಶವನ್ನು ಸಾರುತ್ತಾ, ಅವನಲ್ಲಿ ಹುದುಗಿರುವ ದೈವಿಕತೆಯನ್ನು ಅವನು ತನ್ನ ಜೀವನದ ಪ್ರತಿಯೊಂದು ಚಲನವಲನಗಳಲ್ಲೂ ಅಭಿವ್ಯಕ್ತಪಡಿಸಬೇಕೆಂದು ಸ್ವಾಮಿ ವಿವೇಕಾನಂದರು ಸಾರಿದರು. ದುರಾಲೋಚನೆ ಮತ್ತು ದುರಾಚಾರಗಳನ್ನು ಅಧರ್ಮವೆಂದು ತಿಳಿಸುತ್ತಾ ಧರ್ಮವನ್ನು, 'Science of consciousness' (ಚೈತನ್ಯಾತ್ಮಕ ವಿಜ್ಞಾನ) ಎಂದು ಬಣ್ಣಿಸುವ ಒಂದು ಹೊಸ ವ್ಯಾಖ್ಯೆಯನ್ನು ನೀಡಿದರು. ಹಾಗೆಯೇ ಸ್ವಮತ ಪ್ರತಿಷ್ಠೆಗಾಗಿ ಪರಮತವನ್ನು ಭ್ರಾಂತಿ ಎಂದು ಭಾವಿಸುವ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿ, ಪ್ರತಿಯೊಂದು ಮತವೂ ಸಾಧಕನ ಜೀವನದ ವಿಭಿನ್ನಾವಸ್ಥೆಗಳಿಂದ ಅನುಭೂತವಾದ ಸತ್ಯಸಮೂಹವೆಂದೂ, ಎಲ್ಲವೂ ಒಂದೇ ಅಖಂಡ ತತ್ತ್ವದ ರೂಪಾಂತರ ಮಾತ್ರವೆಂದೂ ತಿಳಿಸುತ್ತಾ, ಎಲ್ಲ ಧರ್ಮಾವಲಂಬಿಗಳ ಮಧ್ಯೆ ಆತ್ಮೀಯತೆಯನ್ನು ಸ್ಥಾಪಿಸಲು **'ಸರ್ವಧರ್ಮಸಮನ್ವಯ ತತ್ತ್ವ'** ವನ್ನು ಸ್ವಾಮೀಜಿ ಪ್ರಚುರಪಡಿಸಿದರು.

ಪರಬ್ರಹ್ಮನ ಒಂದಂಶವಾದ ಆತ್ಮನು ಸತ್-ಚಿತ್-ಆನಂದನೂ, ಪರಿಪೂರ್ಣನೂ, ಅನಾದಿಯೂ, ಅನಂತನೂ ಆಗಿರುವುದರಿಂದಲೇ ಮಾನವರನ್ನು **'ಅಮೃತಸ್ಯ ಪುತ್ರಾಃ'** ಎಂದು ಸಂಬೋಧಿಸಿರುವುದನ್ನು ಉಪನಿಷತ್ತುಗಳಲ್ಲಿ ಕಾಣುತ್ತೇವೆ. **'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ', 'ಅಯಮ್ ಆತ್ಮಾ ಬ್ರಹ್ಮ'** ಎಂಬ ಉಪನಿಷದ್ ಮಹಾವಾಕ್ಯಗಳೂ ಇದನ್ನೇ ಪುಷ್ಟೀಕರಿಸುತ್ತವೆ. ಪರಮಪವಿತ್ರನೂ, ಮುಕ್ತಾತ್ಮನೂ, ನಿತ್ಯಾತ್ಮನೂ ಆದ ಈ ಆತ್ಮವು ತನ್ನ ಸತ್ಯಸ್ವರೂಪವನ್ನರಿಯದೆ ಅಜ್ಞಾನದಲ್ಲಿ ತೊಳಲಾಡುತ್ತಾ, 'ನಾನು ಪಾಪಿ', 'ನಾನು ದುಃಖಿ' ಎಂದು ಭಾವಿಸುತ್ತದೆ.

ಆದರೆ ಜ್ಞಾನ, ಕರ್ಮ, ಭಕ್ತಿ ಅಥವಾ ರಾಜಯೋಗಗಳೆಂಬ ನಾಲ್ಕು ಮಾರ್ಗಗಳನ್ನು ಸಮನ್ವಯಗೊಳಿಸಿಕೊಂಡು ಅನುಷ್ಠಾನಕ್ಕೆ ತಂದಾಗ, ಆಧ್ಯಾತ್ಮಿಕ ಶಕ್ತಿ ಜಾಗೃತವಾಗುತ್ತದೆಂದೂ, ಅದೇ ಹಿಂದೂ ಧರ್ಮದ ತಿರುಳೆಂದೂ ಸ್ವಾಮಿ ವಿವೇಕಾನಂದರು ಸಾರಿದರು. **'ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ', 'ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ'** ಎಂಬ ಕಠೋಪನಿಷತ್ತಿನ ಮಾತಿನಂತೆ, ಈ ಆತ್ಮತತ್ತ್ವವನ್ನು ಕುರಿತು ಕೇಳುವುದಕ್ಕಾಗಲೀ ಅಥವಾ ಕೇಳಿದರೂ ಅದನ್ನು ಅರಿತು ಅರ್ಥೈಸಿಕೊಳ್ಳಲಾಗಲೀ ಬಹಳ ಮಂದಿಗೆ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ಆತ್ಮದ ಸ್ವರೂಪವೇ